**<u>ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕ:14.08.2025 ರಂದು ಪ್ರಮಾಣೀಕರಿಸಲಾಯಿತು.</u>**

**<u>ಪಾಟೀ ಸವಾಲು: ವಾದಿ ಪರ ಶ್ರೀ ಹೆಚ್ ಎನ್ ಬಿ ಎನ್ ವಕೀಲರಿಂದ:</u>**

ನಾನು ಸ್ನಾತಕೋತ್ತರ ಪದವಿ ಹೊಂದಿರುತ್ತೇನೆ. ವಾದಿಯು ಈ ದಾವೆಯನ್ನು ಶಾಶ್ವತ ನಿರ್ಭಂದಕಾಜ್ಞೆ ಕೋರಿ ದಾವೆ ಹೂಡಿರುತ್ತಾರೆ. ವಾದಪತ್ರದಲ್ಲಿರುವ ಸಂಗತಿಗಳನ್ನು ನಾನು ತಿಳಿದುಕೊಂಡಿರುತ್ತೇನೆ. ವಾದಿಯು ಹಾಜರು ಪಡಿಸಿರುವ ದಾಖಲೆಗಳನ್ನು ನಾನು ನೋಡಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಬರೆದ ವಿಚಾರಗಳು ನನಗೆ ಗೊತ್ತು. ನನ್ನ ಪ್ರತಿವಾದಪತ್ರದಲ್ಲಿ ಇರುವ ಸಂಗತಿಗಳು ಕೂಡಾ ನನಗೆ ಗೊತ್ತು. ವಾದಿಯ ಆಸ್ತಿಯ ದಕ್ಷಿಣಕ್ಕೆ ರಸ್ತೆ ಇದೆ ಎಂದರೆ ಸಾಕ್ಷಿಯು ಮುಖ್ಯ ರಸ್ತೆ ಇದೆ ಎಂದು ನುಡಿಯುತ್ತಾರೆ. ವಾದಿಯ ಮನೆಯ ಉತ್ತರಕ್ಕೆ ನನ್ನ ಆಸ್ತಿ ಇದೆ ಎಂದರೆ ಸರಿ. ವಾದಿಯ ಮನೆಯ ಉತ್ತರಕ್ಕೆ ಇರುವ ನನ್ನ ಮನೆ ಈಗ ಶಿಥಿಲಾವಸ್ಥೆಯಲ್ಲಿದ್ದು, ಈಗ ನಾನು ಅಲ್ಲಿ ವಾಸವಿರುವುದಿಲ್ಲ. ಸದರಿ ನನ್ನ ಮನೆಯ ಹಳೆ ನಂಬರ್ 738 ಮತ್ತು ಹೊಸ ನಂಬರ್ 1063/897 ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ಸ್ವತ್ತಿನ ಪೂಪ 50 ಅಡಿ ಮತ್ತು ಉಃಪ 20 ಅಡಿಗಳು ಇರುತ್ತದೆ. ನನ್ನ ಮನೆಯ ಉತ್ತರಕ್ಕೆ ರೇವಣ್ಣನವರ ಸ್ವತ್ತು ಇರುತ್ತದೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರಿದು ಸದರಿ ಸ್ವತ್ತು ಈಗ ಗೀತಾ ಕೋಂ ಮಾದೇಗೌಡ ಅವರ ಹೆಸರಿನಲ್ಲಿರುತ್ತದೆ ಎಂದು ನುಡಿಯುತ್ತಾರೆ. ನನ್ನ ಮನೆಯ ಪೂರ್ವಕ್ಕೆ ಗಲ್ಲಿ ಇದೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರಿದು ಕಿರಿದಾದ ರಸ್ತೆ ಇದೆ ಎಂದು ನುಡಿಯುತ್ತಾರೆ. ನನ್ನ ಮನೆಯ ಪಶ್ಚಿಮಕ್ಕೆ ಗಲ್ಲಿ ಇರುತ್ತದೆ. ನನ್ನ ಶಿಥಿಲವಾದ ಮನೆಯ ಪೂರ್ವಕ್ಕೆ ಕಿರಿದಾದ ರಸ್ತೆ ಇದೆ ಎಂದು ತೋರಿಸಲು ನಾನು ಬನ್ನೂರು ಪುರಸಭೆಯವರಿಂದ ಪಡೆದ ದಾಖಲೆಯನ್ನು ಹಾಜರು ಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ತಾನು ಹಾಜರು ಪಡಿಸಿರುವ ದಾಖಲೆಗಳನ್ನು ತೋರಿಸಲಾಗಿ ಅವುಗಳನ್ನು ಸಾಕ್ಷಿ ನೋಡಿ ಪರಿಶೀಲಿಸಿ ತಾನು ತನ್ನ ಮನೆಯ ಪೂರ್ವಕ್ಕೆ ಕಿರಿದಾದ ರಸ್ತೆ ಇದೆ ಎಂದು ತೋರಿಸಲು ನಾನು ಯಾವುದೇ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ.

ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ವಾದಿ ನನ್ನ ಸ್ವತ್ತನ್ನು ಅತಿಕ್ರಮ ಮಾಡಿಕೊಂಡು ಮನೆಯನ್ನು ನಿರ್ಮಾಣ ಮಾಡಿರುತ್ತಾರೆ ಎಂದು ಹೇಳಿರುತ್ತೇನೆ ಎಂದರೆ ಸರಿ. ವಾದಿಯು ನನ್ನ ಸ್ವತ್ತನ್ನು ಅತಿಕ್ರಮಣ ಮಾಡಿ ಮನೆ ಕಟ್ಟಿರುವ ವಿಚಾರವನ್ನು ನಾನು ನನ್ನ ಪ್ರತಿವಾದಪತ್ರದಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ವಾದಿ ನನ್ನ ಮನೆಯ ಸ್ವತ್ತನ್ನು ಒತ್ತುವರಿ ಮಾಡಿಕೊಂಡಿರುವುದಾಗಿ ನಾನು ಹಾಜರು ಪಡಿಸಿರುವ ಯಾವುದೇ ದಾಖಲೆಗಳಲ್ಲಿ ಕಂಡುಬರುವುದಿಲ್ಲ ಎಂದರೆ ಸರಿ.

ವಾದಿಯು 27.12.1982 ರಂದು ಮುಗ್ಗಾಲೆ ಗೌಡ ಪೌತಿ ಮಗ ಜವನಯ್ಯನ ತಮ್ಮ ಅವರಿಂದ ಅರ್ಧ ಭಾಗವನ್ನು ಅಂದರೆ ಪೂಪ 13 ಅಡಿ ಮತ್ತು ಉ:ದ:20 ಅಡಿ ಖರೀದಿಸಿರುತ್ತಾರೆ . ನಾನು ವಾದಿ ನನ್ನ ಮನೆಯ ಸ್ವತ್ತನ್ನು ಒತ್ತುವರಿ ಮಾಡಿ ಅವರ ಮನೆಯನ್ನು ಕಟ್ಟಿರುವುದಾಗಿ ಹೇಳಿದ್ದು, ಆ ರೀತಿ ವಾದಿ ಯಾವ ದಿನಾಂಕದಂದು ಅವರ ಮನೆಯನ್ನು ಕಟ್ಟಿರುತ್ತಾರೆ ಎಂದುನನಗೆ ಹೇಳಲಾಗುವುದಿಲ್ಲ, ಸಾಕ್ಷಿಯು ಮುಂದುವರಿದು ಆ ಸಂದರ್ಭದಲ್ಲಿ ನಾನು ಜನಿಸಿರಲಿಲ್ಲ, ನನ್ನ ತಂದೆಯಿಂದ ವಾದಿ ನಮ್ಮ ಸ್ವತ್ತನ್ನು ಒತ್ತುವರಿ ವಾಡಿಕೊಂಡ ಬಗ್ಗೆ ತಿಳಿದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಸ್ವತ್ತಿನ ದಕ್ಷಿಣ ಭಾಗವನ್ನು ವಾದಿ ಒತ್ತುವರಿ ಮಾಡಿಕೊಂಡಿರುತ್ತಾರೆ. ವಾದಿ ನನ್ನ ಸ್ವತ್ತಿನ ಪೂಪ 12 ಅಡಿ ಮತ್ತು ಉ:ದ.12 ಅಡಿಗಳನ್ನು ಒತ್ತುವರಿ ಮಾಡಿಕೊಂಡಿರುತ್ತಾರೆ. ನಾನೇ ಸದರಿ ನನ್ನ ಆಸ್ತಿಯನ್ನು ಅಳತೆ ಮಾಡಿ ವಾದಿ 12 X 12 ಅಡಿಗಳನ್ನು ಒತ್ತುವರಿ ಮಾಡಿಕೊಂಡ ಬಗ್ಗೆ ತಿಳಿದುಕೊಂಡಿರುತ್ತೇನೆ. ವಾದಿ ಒತ್ತುವರಿ ಮಾಡಿಕೊಂಡಿರುವ ನನ್ನ ಆಸ್ತಿಯನ್ನು ಅವರಿಂದ ಸ್ವಾಧೀನ ಕೊಡಿಸುವಂತೆ ನಾನು ಯಾವುದೇ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿರುವುದಿಲ್ಲ. ನನ್ನ ತಂದೆ ಅಥವಾ ನಾನು ಈವರೆಗೂ ವಾದಿಯ ವಿರುದ್ಧ ಸ್ವಾಧೀನ ಕೋರಿ ಯಾವುದೇ ದಾವೆ ಹೂಡಿರುವುದಿಲ್ಲ.

ನಿ ಪಿ 7 ರಲ್ಲಿ ಕಂಡು ಬರುವಂತೆ ಗೀತಾ ಕೋಂ ಮಾದೇಗೌಡರವರ ಮನೆಯ ಉತ್ತರಕ್ಕೆ ತಿಮ್ಮೇಗೌಡರ ಮನೆ ಇದೆ ಎಂದರೆ ಸರಿ. ನಿ ಪಿ 11 ರ ಫೋಟೊದಲ್ಲಿ ಕಾಣುವ ಜಗಲಿಯು ಮುಂಭಾಗದಲ್ಲಿ ಕಾಣುವ ಸಂಪ್ ವಾದಿಯದ್ದು ಇರುತ್ತದೆ ಎಂದರೆ ಸರಿ. ಸದರಿ ಸಂಪ್ ನ ಉತ್ತರಕ್ಕೆ ಕಂಡು ಬರುವ ಗೊಡೆ ನನ್ನ ಮನೆಯದ್ದು ಇರುತ್ತದೆ ಎಂದರೆ ಸಾಕ್ಷಿಯು ನಿ ಪಿ 11 ರಲ್ಲಿ ನನ್ನ ಮನೆ ಕಾಣುವುದಿಲ್ಲ ಎಂದು ನುಡಿಯುತ್ತಾರೆ. ವಾದಿಯ ಮನೆಯ ಸಂಪ್ ನ ನೇರಕ್ಕೆ ಗೀತಾ ಅವರ ಮನೆಯ ಜಗಲಿ ಕೂಡಾ ಇದೆ ಎಂದರೆ ಸರಿಯಲ್ಲ. ಗೀತಾ ಅವರ ಮನೆಯ ಉತ್ತರಕ್ಕೆ ತಿಮ್ಮೇಗೌಡ ಅವರು ಅವರ ಮನೆಯ ಮುಂದೆ ನೀರಿನ ತೊಟ್ಟಿ ಕಟ್ಟಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ವಾದಿ, ಗೀತಾ ಮತ್ತು ತಿಮ್ಮೇಗೌಡ ಅವರ ಮನೆಯ ಮುಂದೆ ಇರುವ ಗಲ್ಲಿ ಕೇವಲ ಆರೂವರೆ ಅಡಿ ಮಾತ್ರ ಇರುತ್ತದೆ ಎಂದರೆ ಸರಿಯಲ್ಲ. ತಿಮ್ಮೇಗೌಡರು ಆರೂವರೆ ಅಡಿ ಪೈಕಿ ಎರಡು ಅಡಿ ಅತಿಕ್ರಮಿಸಿ ನೀರಿನ ತೊಟ್ಟಿ ಇಟ್ಟುಕೊಂಡಿರುತ್ತಾರೆ ಎಂದರೆ ಸರಿ.

ಮುಂದುವರಿದ ಪಾಟೀ ಸವಾಲಿಗೆ ಸಮಯ ಕೇಳಿದ್ದು, ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓದಿ ಹೇಳಿ ಕೇಳಿ ಸರಿಯಾಗಿದೆ.**

(ಸಚಿನ್ ಹೆಚ್.ಆರ್)
ಸಿವಿಲ್ ನ್ಯಾಯಾಧೀಶರು ಮತ್ತು
ಜೆ .ಎಂ .ಎಫ್ .ಸಿ ., ತಿ .ನರಸೀಪುರ